

## 'ಕಲೇಸಂ' ನೂತನ ಅಧ್ಯಕ್ಷೆ ಎಚ್.ಎಲ್. ಪುಷ್ಪ ಜೊತೆ ಮಾತುಕತೆ

ಸ್ಥಾನಮಾನಗಳು ಸಿಗುತ್ತಿಲ್ಲ. ಮೀಸಲು ಪರಧಿಯಲ್ಲಿ ಒಬ್ಬಿಬ್ಬರು ಇರುವಂತೆ ನೋಡಿಕೊಳ್ಳುತ್ತಿದ್ದಾರೆ. ಈ ಅನುಪಾತ ತಪ್ಪಬೇಕು ಎಂದರೆ ಸಮನಾಂತರ ವೇದಿಕೆ ಬೇಕೇಬೇಕು. ಅದಕ್ಕಾಗಿ ನಾವು ನಮ್ಮದೇ ಸಂಸ್ಥೆಯನ್ನು ಹುಟ್ಟುಹಾಕುತ್ತೇವೆ ಎನ್ನುವ ಸಂಕಲ್ಪದಿಂದ 1979ರಲ್ಲಿ 'ಕರ್ನಾಟಕ ಲೇಖಕಿಯರ ಸಂಘ' ಅಸ್ತಿತ್ವಕ್ಕೆ ಬಂತು. ಇದನ್ನು ಕಟ್ಟುವ ಪ್ರಕ್ರಿಯೆಯಲ್ಲಿ ಜಿ. ನಾರಾಯಣ ಅವರ ಅಪಾರ ಪರಿಶ್ರಮ ಇದೆ ಎನ್ನುವುದನ್ನು ಮರೆಯಬಾರದು. ಇವತ್ತು ನಾವು ವರ್ಣ–ವರ್ಗ ಮೀರಿ ಬೆಳೆಯಬೇಕಾಗಿದೆ. ಅಗತ್ಯ ಇದ್ದ ಕಡೆಯಲ್ಲಿ ಪುರುಷರನ್ನೂ ಸಂಘ ಒಳಗೊಳ್ಳುತ್ತದೆ. ಲೇಖಕಿಯರ ಸಂಘದಲ್ಲಿ ಪುರುಷರಿಗೆ ಪ್ರವೇಶವೇ ಇಲ್ಲ ಎನ್ನುವ ನಿಷೇಧ ಏನಿದೆಯೋ ಅದನ್ನು ಸಡಿಲಿಸಬೇಕು. ಅಗತ್ಯ ಇದ್ದಾಗಲೆಲ್ಲ ಲಿಂಗಭೇದದ ಆಚೆ ಲೇಖಕ–ವಿಮರ್ಶಕರನ್ನೂ ಆಹ್ವಾನಿಸುತ್ತೇವೆ.

◆ ವಿವಿಧ ಸಿದ್ಧಾಂತ–ಚಿಂತನೆಗಳ ಸದಸ್ಯರಿರುವ ಸಂಸ್ಥೆಯನ್ನು ಮುನ್ನಡೆಸುವ ನಿಟ್ಟಿನಲ್ಲಿ ನಿಮ್ಮ ಚಿಂತನೆ ಯಾವ ಬಗೆಯದು?

ಚಿಂತನಾಪಂಥದ ಭೇದ ಸಮಾಜದ ಎಲ್ಲ ಕಡೆ ಇದ್ದೇ ಇರುತ್ತದೆ. ಸಂಘ–ಸಂಸ್ಥೆ ಮಾತ್ರವಲ್ಲ. ನಾವು ಕೆಲಸ ಮಾಡುವ ಸ್ಥಳದಲ್ಲಿಯೂ ಈ ರೀತಿಯ ವ್ಯತ್ಯಾಸ ಇರುತ್ತದೆ. ಯಾವುದೋ ಕಾಲದ ಸಿದ್ಧಾಂತಕ್ಕೆ ಅಂಟಿಕೊಂಡು ಅದನ್ನೇ ಪ್ರತಿಪಾದಿಸುತ್ತಾ ಕುಳಿತರೆ ಇನ್ನೇನೋ ಸಮಸ್ಯೆ ಉಂಟಾಗಬಹುದು. ಹಳೆಯದನ್ನು ಯಥಾವತ್ತು ಪಾಲಿಸಬೇಕು ಎನ್ನುವುದಕ್ಕಿಂತ ಅದರಲ್ಲಿ ಆರೋಗ್ಯಕರ ಬದಲಾವಣೆ ಬೇಕು ಎಂದು ನಾನು ಭಾವಿಸುತ್ತೇನೆ. ಜಾಗತಿಕ ಮಟ್ಟದಲ್ಲಿ ಲೇಖಕಿಯರನ್ನು ಬೆಳೆಸುವುದು ಹೇಗೆ ಎನ್ನುವುದು ಮುಖ್ಯ. ಸೈದ್ಧಾಂತಿಕ ಚಿಂತನೆಯ ಪಂಥ ವ್ಯಕ್ತಿಗತವಾಗಿ ಇರುತ್ತದೆ. ಇದೊಂದು ಸಂಘ, ಚಳವಳಿ ಅಲ್ಲ. ಇಲ್ಲಿ ಆರೋಗ್ಯಕರವಾದ ಚಿಂತನೆಗಳನ್ನು, ಯಾರ ಭಾವನೆಗೂ ಧಕ್ಕೆಯಾಗದಂತೆ ಪಾಲಿಸುತ್ತೇನೆ. ಎಡ–ಬಲ ಎನ್ನುವುದಕ್ಕಿಂತ ಯಾರಿಗೆ ಅವಕಾಶಗಳು ಸಿಕ್ಕಿಲ್ಲ, ಅವರನ್ನು ಗುರುತಿಸುವುದು ನಮ್ಮ ಕೆಲಸ.

◆ ನಾಲ್ಕು ದಶಕಗಳ ಚರಿತ್ರೆ ಇರುವ ಲೇಖಕಿಯರ ಸಂಘ, ಮಹಿಳಾ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಯಾಕೆ ಮೌನ ಮುರಿಯುವುದಿಲ್ಲ?

ಆಯಾ ಕಾಲದ ಸವಾಲುಗಳಿಗೆ ಸಂಘ ಸ್ಪಂದಿಸಿದೆ. ಇತ್ತೀಚೆಗೆ ಮಹಿಳಾ ದೌರ್ಜನ್ಯ–ಹಲ್ಲೆಗಳು ಹೆಚ್ಚು ಕಾಣಿಸುತ್ತಿವೆ. ಮಾಧ್ಯಮ ಬೆಳೆದಂತೆ ಹೊರ ಜಗತ್ತಿಗೆ ಮಹಿಳಾ ದೌರ್ಜನ್ಯಗಳು ಹೆಚ್ಚು ಕಾಣಿಸುತ್ತಿವೆ. ಮಹಿಳೆಯ ಉಡುಗೆ, ತೊಡುಗೆ, ಆಹಾರ ಎಲ್ಲವೂ ಚರ್ಚೆಯ ವಿಷಯವಾಗಿದೆ. ಮೊದಲು ಈ ಮಟ್ಟಿಗಿನ ಚರ್ಚೆ ಇರಲಿಲ್ಲ. ಕೆಲವು ಮಿತಿಯಲ್ಲಿ ನಾವು ಸೋತಿದ್ದೂ ಇದೆ. ಕೊರೊನಾ ಸಂದರ್ಭದಲ್ಲಿ ಪರಿಣಾಮಕಾರಿಯಾಗಿ ಕೆಲಸಮಾಡಲು ಆಗಿಲ್ಲ. ಸಂಘ ಚಳವಳಿಯ ರೂಪದಲ್ಲಿ ಪ್ರತಿಕ್ರಿಯಿಸಲು ಆಗುವುದೂ ಇಲ್ಲ. ಸಂಘ ಒಂದು ಚಳವಳಿಯನ್ನು ರೂಪಿಸಲು ಅದರದ್ದೇ ಆದ ಮಿತಿಗಳು ಇರುತ್ತವೆ. ಅದಕ್ಕೆ ಬೈಲಾ ಇರುತ್ತದೆ. ಸಮಾನ ಆಶಯ, ಹಿತಾಸಕ್ತಿ, ಒತ್ತಾಸೆಗೆ ಚಳವಳಿಗಳನ್ನು ಬೆಂಬಲಿಸುವ ಸಾಧ್ಯತೆ ಇದ್ದೇ ಇರುತ್ತದೆ. ಅದನ್ನು ಕಾಲಕ್ಕೆ ತಕ್ಕಂತೆ ನಿರ್ಧರಿಸಬೇಕಾಗುತ್ತದೆ.

◆ ಕೆಲವು ವರ್ಷಗಳಿಂದ ಸದ್ದೇ ಇಲ್ಲದ ಸಂಘ, ಚುನಾವಣೆ ಘೋಷಣೆಯ ನಂತರ ಹೆಚ್ಚು ಸುದ್ದಿ ಮಾಡಿತು. ಇದರ ಹಿನ್ನೆಲೆ ಏನು?

ದೇಶದ ಉದ್ದಗಲಕ್ಕೂ ಯಾವುದೇ ಚುನಾವಣೆಯನ್ನು ತೆಗೆದುಕೊಂಡರೂ ಸದ್ದಿನ ಸುದ್ದಿ ಇದ್ದೇ ಇರುತ್ತದೆ. ಚುನಾವಣೆ ಅಂದರೆ ರಾಜಕಾರಣ, ಅಲ್ಲಿ ಗದ್ದಲದ್ದೇ ಸದ್ದು. ಈ ಹಿನ್ನೆಲೆಯಲ್ಲಿ ಚುನಾವಣೆ ಇಲ್ಲೂ ಸದ್ದು ಉಂಟಾಗಿರಬಹುದು.

ಚುನಾವಣೆ ಕಣದಲ್ಲಿ ಇದ್ದ ನನಗೆ ಹತಾಶೆ–ಸಂತೋಷ ಎರಡೂ ಒಂದೇ. ಈ ಬಾರಿ ಪಕ್ಷಗಳ ರಾಜಕೀಯ ಪ್ರೇರಿತವಾಗಿ ಚುನಾವಣೆ ನಡೆಯಿತು ಎಂಬ ಆರೋಪವನ್ನೂ ಅಲ್ಲಗಳೆಯಲಾರೆ. ಅದರ ಸ್ಪಷ್ಟ ಚಿತ್ರಣ ನನಗಿಲ್ಲ. ಹಾಗೇನಾದರೂ ಆಗಿದ್ದರೆ ಅದು ಸದಸ್ಯರಲ್ಲದವರಿಂದ ಆಗಿದೆ ಎಂದು ಮಾತ್ರ ಹೇಳಬಲ್ಲೆ. ಸದಸ್ಯರಲ್ಲದ ವ್ಯಕ್ತಿಗಳು ಚುನಾವಣೆಯ ಸಂದರ್ಭದಲ್ಲಿ ಭಾಗಿಯಾದರು. ಈ ಬಗ್ಗೆ ಹಿರಿಯ ಸದಸ್ಯರು, ಸಂಘವನ್ನು ಕಟ್ಟಿ ಬೆಳೆಸಿದ ಹಿಂದಿನ ಅಧ್ಯಕ್ಷರೂ ನೊಂದು ನುಡಿದಿದ್ದಾರೆ. ಇದಕ್ಕೆ ನಾನು ಯಾರನ್ನೂ ದೂರುವುದಿಲ್ಲ. ಎಲ್ಲವನ್ನೂ ಕಾಲವೇ ಸರಿಪಡಿಸುತ್ತದೆ. ರಾಜಕೀಯ ಪ್ರೇರಿತವಾಗಿಯೇ ಎಲ್ಲ ಚುನಾವಣೆಗಳು ನಡೆಯುತ್ತವೆ. ಅದರ ಭಾಗ ಇದೂ ಒಂದು ಎಂದು ಭಾವಿಸುತ್ತೇನೆ.

◆ ಸಾಹಿತ್ಯ ಸಂಘಟನೆಗಳಲ್ಲಿ ವ್ಯವಸ್ಥೆಯೇ ತಾರತಮ್ಯ ಮಾಡುತ್ತಿದೆ ಎನ್ನುವ ದೂರಿದೆ. ಇದಕ್ಕೆ ನೀವು ಏನಂತೀರಿ?

ಸರ್ಕಾರ ಸಮಾನವಾಗಿ ಕಾಣಬೇಕು. ಹಾಗೆಂದು, ಲೇಖಕಿಯರ ಸಂಘದ ಅಧ್ಯಕ್ಷರಿಗೂ ಮಂತ್ರಿಯ ಸ್ಥಾನಮಾನ ನೀಡಬೇಕು ಎನ್ನುವುದು ನನ್ನ ಮಾತಿನ ಅರ್ಥ ಅಲ್ಲ. ಸಮಾನತೆ ಎನ್ನುವುದು ವ್ಯವಸ್ಥೆಯಲ್ಲಿ ಸಹಜವಾಗಿ ಇರಬೇಕು. ರಾಜ್ಯದಲ್ಲಿ ಲೇಖಕಿಯರನ್ನು ಪ್ರತಿನಿಧಿಸುವ ಏಕೈಕ ಸಂಸ್ಥೆ ನಮ್ಮದು. ಬೇರೆ ರಾಜ್ಯಗಳಿಗೂ ಇದು ಮಾದರಿಯಾಗಿದೆ. ಈ ಸಂಸ್ಥೆಗೆ ಸಿಗಬೇಕಾದ ಎಲ್ಲ ರೀತಿಯ ಸವಲತ್ತು, ಸ್ಥಾನಮಾನ ಸಿಗಬೇಕು. ಸದ್ಯದ ಪರಿಸ್ಥಿತಿಯಲ್ಲಿ ಸ್ಥಾನಮಾನಕ್ಕಿಂತಲೂ ಅನುದಾನವನ್ನು ಹೆಚ್ಚು ಕೊಡಬೇಕು. ಆಗ ಜಿಲ್ಲಾ ಕೇಂದ್ರಗಳಲ್ಲಿಯೂ ವ್ಯಾಪಕವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ನಮಗೆ ವರ್ಷಕ್ಕೆ ಕೇವಲ ಎರಡು ಲಕ್ಷ ರೂಪಾಯಿ ಅನುದಾನ ಸಿಗುತ್ತಿದೆ. ಲೇಖಕಿಯರ ಸಂಘಕ್ಕೆ ಅನುದಾನ ಹೆಚ್ಚಿಸಿ ಆರ್ಥಿಕವಾಗಿ ಸದೃಢ ಮಾಡಬೇಕಿದೆ.

ಪ್ರತಿಕ್ರಿಯಿಸಿ: **feedback@sudha.co.in**